KAKP410051382022

MEGHA SOMANNAVAR

Digitally signed by MEGHA SOMANNAVAR
Date: 2026.03.07 17:51:15 +0530

# 1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಗಂಗಾವತಿ.

ಉಪಸ್ಥಿತರುಃ ಮೇಘಾ ಸೋಮಣ್ಣವರ
ಬಿ.ಬಿ.ಎ. ಎಲ್.ಎಲ್.ಬಿ.
1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಗಂಗಾವತಿ.

ದಿನಾಂಕಃ **04** ನೇ ಮಾರ್ಚ್ **2026** ರಂದು ಉಚ್ಚರಿಸಲ್ಪಟ್ಟಿತು

**ಅಪರಾಧಿಕ ಪ್ರಕರಣ ಸಂಖ್ಯೆಃ 3470/2022**

ಪಿರ್ಯಾದಿಃ **1)** ಕರ್ನಾಟಕ ಸರ್ಕಾರ
ಅಬಕಾರಿ ನಿರೀಕ್ಷಕರು ವಲಯ ಗಂಗಾವತಿ

**(**ಮಾನ್ಯ ಸ.ಸ.ಅ. ರವರ ಮುಖಾಂತರ**)**

ವಿರುದ್ಧ

ಆರೋಪಿತರುಃ **1)** ನಾಗಪ್ಪ ಬೊಮ್ಮನಾಳ ತಂದೆ ಭೀರಪ್ಪ ಬೋಮ್ಮನಾಳ,
ವಯಸ್ಸುಃ 45 ವರ್ಷ, ಉಃ ಒಕ್ಕಲುತನ,
ವಾಸಃ ಜೀರಾಳ, ತಾಃ ಕನಕಗಿರಿ, ಜಿಃ ಕೊಪ್ಪಳ.

(ಆರೋಪಿಪರ ಶ್ರೀ.ಹೆಚ್.ಬಿ.ಪಿ. ವಕೀಲರು)

| | |
|---|---|
| ಅಪರಾದ ನಡೆದ ದಿನಾಂಕ | **24-08-2022** |
| ಅಪರಾದ ವರದಿಯಾದ ದಿನಾಂಕ | **24-08-2022** |
| ದೋಷಾರೋಪಣಾ ಪಟ್ಟಿ ಸಲ್ಲಿಸಿದ ದಿನಾಂಕಃ | **20-12-2022** |
| ದೋಷಾರೋಪಣಾ ಮಾಡಿದ ದಿನಾಂಕಃ | **23-01-2025** |

| | |
|---|---|
| ಸಾಕ್ಷಿ ಪ್ರಾರಂಭವಾದ ದಿನಾಂಕ | **12-03-2025** |
| ತೀರ್ಪಿಗೆ ಕಾಯ್ದಿರಿಸಲಾದ ದಿನಾಂಕಃ | **25-02-2026** |
| ತೀರ್ಪಿನ ದಿನಾಂಕಃ | **04-03-2026** |

| Rank of the accused | Name of the Accused | Date of Arrest | Date of Release on Bail | Offences Charged with | Whether Acquitted or Convicted | Sentence Imposed | Period of Detention Undergone during trial for purpose of Sec.428 of the Cr.PC |
|---|---|---|---|---|---|---|---|
| 01 | Nagappa Bommanala S/o Bheerappa Bommanala | - | - | 14, 15, 32, 34, 38(A), 43 of KE Act and Sec. 272 of IPC | Acquitted | -- | -- |

## ತೀರ್ಪು

ಈ ಪ್ರಕರಣವನ್ನು ಅಬಕಾರಿ ಉಪನೀರಿಕ್ಷಕರು ವಲಯ ಗಂಗಾವತಿ ಪೋಲೀಸ್ ಠಾಣೆ ಆರೋಪಿತನ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ **32, 34, 38A, 43** ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತು ದಾಖಲಿಸಿದ್ದಿರುತ್ತದೆ.

**2.** ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ

ಅ) ದಿನಾಂಕಃ 24.08.2022 ರಂದು ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ಅಬಕಾರಿ ಪೋಲಿಸ ಠಾಣೆ ವಲಯ ಗಂಗಾವತಿ ಹದ್ದಿ ಪೈಕಿ ಕನಕಗಿರಿ ತಾಲೂಕಿನ ಜೀರಾಳ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಒಂದು ಕಿರಾಣಿ ಅಂಗಡಿಯಲ್ಲಿ ಆರೋಪಿತನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಸೆಕ್ಷನ್ 14, 15 ರ ಉಲ್ಲಂಘನೆ ಮಾಡಿ ಆರೋಪಿತನು ತನ್ನ ಸ್ವಂತ ಫಾಯಿದೆಗೋಸ್ಕರ ಅನಧಿಕೃತವಾಗಿ ತನ್ನ ಹತ್ತಿರ ಯಾವುದೇ ಲೈಸನ್ಸ ಅಥವಾ ಪರಮಿಟ್ ಇಲ್ಲದೆ ಇದ್ದರೂ ಅನಧಿಕೃತವಾಗಿ ಮಾನವ ಸೇವನೆಗೆ ಯೋಗ್ಯವಲ್ಲದಂತಹ 180 ಎಂ.ಎಲ್ ಅಳತೆಯ 8 ಪಿ.ಎಮ್ ವಿಸ್ಕಿಯ

ರಟ್ಟಿನ ಬಾಕ್ಸ್‌ಗಳ ಮತ್ತು 90 ಎಂ.ಎಲ್ ಅಳತೆಯುಳ್ಳ ಓಸಿ ವಿಸ್ಕಿಯ ಒಟ್ಟು 71 ಟೆಟ್ರಾ ಪ್ಯಾಕಗಳು, ಮದ್ಯವನ್ನು ಮಾನವ ಸೇವನೆಗೆ ಯೋಗ್ಯವಲ್ಲ ಅಂತಾ ಗೊತ್ತಿದ್ದರೂ ಮಾರಾಟ ಮಾಡುವ ಸಲುವಾಗಿ ಆರೋಪಿತನು ತನ್ನ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದು, ಇರುತ್ತದೆ.

**3.** ಘಟನೆಯ ಬಗ್ಗೆ ಚಾಸಾ-1 ರವರು ನೀಡಿದ ಪ್ರಥಮ ವರದಿಯ ಆಧಾರದ ಮೇಲೆ ಅಪರಾಧ ಸಂಖ್ಯೆ: 9/2022-23/2404SIE2/240404 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಿದ ಅಬಕಾರಿ ನಿರೀಕ್ಷಕರು ವಲಯ ಗಂಗಾವತಿರವರು ಆರೋಪಿತನ ವಿರುದ್ದ ಮೇಲ್ಕಾಣಿಸಿದ ಕಲಂಗಳ ಅಡಿಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**4.** ಆರೋಪಿತನು ಜಾಮೀನಿನ ಮೇಲಿರುತ್ತಾರೆ. ಆದೇಶಿಕೆ ಜಾರಿಯಾದ ನಂತರ ನ್ಯಾಯಾಲಯದ ಮುಂದೆ ಹಾಜರಾದ ಆರೋಪಿಗೆ ಪ್ರಕರಣದ ದಾಖಲೆಗಳ ನಕಲುಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರ ಪ್ರಕಾರ ಒದಗಿಸಲಾಗಿದೆ. ಕರ್ನಾಟಕ ಅಬಕಾರಿ ಕಾಯ್ದೆ ಕಲಂ **32, 34, 38A, 43** ಮತ್ತು ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆ ಕಲಂ **272** ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತು ದೋಷಾರೋಪಣೆಯನ್ನು ಹೋರಿಸಲಾಗಿರುತ್ತದೆ. ಆರೋಪಿತನು ತನ್ನ ವಿರುದ್ದದ ದೋಷಾರೋಪಣೆಯನ್ನು ಅಲ್ಲಗಳೆದಿರುವ ಕಾರಣ ಅದನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು 5 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-5 ಎನ್ನುವುದಾಗಿ ವಿಚಾರಿಸಿಕೊಂಡಿರುತ್ತಾರೆ ಮತ್ತು 14

ದಾಖಲೆಗಳನ್ನು ಹಾಜರುಪಡಿಸಿ ಅವುಗಳನ್ನು ನಿಪಿ-1 ರಿಂದ ನಿಪಿ-14 ಎನ್ನುವುದಾಗಿ ಗುರುತಿಸಿಕೊಂಡಿರುತ್ತದೆ ಹಾಗೂ ಮುದ್ದೆ ಮಾಲು-1 ಮಧ್ಯದ ಟೆಟ್ರಾ ಪ್ಯಾಕೀಟಗಳು ಎನ್ನುವುದಾಗಿ ಗುರುತಿಸಿಕೊಂಡಿರುತ್ತದೆ.

**5.** ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಆರೋಪಿತನು ತನ್ನ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಒದಗಿಸಿರುವುದಿಲ್ಲ.

**6.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತನ ಪರ ನ್ಯಾಯವಾದಿಗಳ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

**7.** ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

ಅಂಶಗಳು

1. ದಿನಾಂಕಃ 24.08.2022 ರಂದು ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ಅಬಕಾರಿ ಪೋಲಿಸ ಠಾಣೆ ವಲಯ ಗಂಗಾವತಿ ಹದ್ದಿ ಪೈಕಿ ಕನಕಗಿರಿ ತಾಲೂಕಿನ ಜೀರಾಳ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಒಂದು ಕಿರಾಣಿ ಅಂಗಡಿಯಲ್ಲಿ ಆರೋಪಿತನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಸೆಕ್ಷನ್ 14, 15 ರ ಉಲ್ಲಂಘನೆ ಮಾಡಿ ಆರೋಪಿತನು ತನ್ನ ಸ್ವಂತ ಫಾಯಿದೆಗೋಸ್ಕರ ಅನಧಿಕೃತವಾಗಿ ತನ್ನ ಹತ್ತಿರ ಯಾವುದೇ

ಲೈಸನ್ಸ್ ಅಥವಾ ಪರಮಿಟ್ ಇಲ್ಲದೆ ಇದ್ದರೂ ಅನಧಿಕೃತವಾಗಿ ಮಾನವ ಸೇವನೆಗೆ ಯೋಗ್ಯವಲ್ಲದಂತಹ 180 ಎಂ.ಎಲ್ ಅಳತೆಯ 8 ಪಿ.ಎಮ್ ವಿಸ್ಕಿಯ ರಟ್ಟಿನ ಬಾಕ್ಸಗಳ ಮತ್ತು 90 ಎಂ.ಎಲ್ ಅಳತೆಯುಳ್ಳ ಓಸಿ ವಿಸ್ಕಿಯ ಒಟ್ಟು 71 ಟೆಟ್ರಾ ಪ್ಯಾಕಗಳು, ಮದ್ಯವನ್ನು ಮಾರಾಟ ಮಾಡುವ ಸಲುವಾಗಿ ಆರೋಪಿತನು ತನ್ನ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದು, ಆ ಮೂಲಕ ಕಲಂ **32, 34, 38(ಎ), 43** ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆಯೇ?

2. ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತ ಅಕ್ರಮವಾಗಿ, ಯಾವುದೇ ಪರವಾನಿಗೆ ಇಲ್ಲದೇ, ಮದ್ಯವನ್ನು ಮಾನವ ಸೇವನೆಗೆ ಯೋಗ್ಯವಲ್ಲ ಅಂತಾ ಗೊತ್ತಿದ್ದರೂ ತನ್ನ ಸ್ವಂತ ಫಾಯ್ದೆಗೋಸ್ಕರ ಮಾರಾಟ ಮಾಡಲು ಸಂಗ್ರಹಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.**272** ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದಾನೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆಯೇ?

3. ಏನು ಆದೇಶ?

**8.** ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆ,

ಅಂಶ ಸಂಖ್ಯೆ **1**ಃ ನಕಾರಾತ್ಮಕವಾಗಿ

ಅಂಶ ಸಂಖ್ಯೆ **2**ಃ ನಕಾರಾತ್ಮಕವಾಗಿ

ಅಂಶ ಸಂಖ್ಯೆ **3**ಃ ಅಂತಿಮ ಆದೇಶದಂತೆ. ಈ ಮುಂದಿನ

**-: ಕಾರಣಗಳು :-**

**9.** ಅಂಶ ಸಂಖ್ಯೆ **1** ಮತ್ತು **2**:- ಈ ಎರಡು ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಅನುಕೂಲತೆಯ ದೃಷ್ಟಿಯಿಂದ ಮತ್ತು ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಜೊತೆಜೊತೆಯಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

**10.** ಅಭಿಯೋಜನೆಯು ತನ್ನ ನಿಲುವನ್ನು ರುಜವಾತುಪಡಿಸಲು ಒಟ್ಟು 8 ಜನ ಸಾಕ್ಷಿದಾರರನ್ನು ಸಾಕ್ಷ್ಯ ಪಟ್ಟಿಯಲ್ಲಿ ಹೆಸರಿಸಿಕೊಂಡಿರುತ್ತದೆ. ಆ ಪೈಕಿ 5 ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದು. ಹೀಗಾಗಿ ಆರೋಪ ನಿರ್ಣಯಕ್ಕಾಗಿ 5 ಜನ ಸಾಕ್ಷಿದಾರರ ಸಾಕ್ಷ್ಯವನ್ನಷ್ಟೇ ಪ್ರಕರಣದ ಸಂದರ್ಭಗಳ ಹಿನ್ನಲೆಯಲ್ಲಿ ತನ್ಮೂಲಕವಾಗಿ ಪರಿಶೀಲಿಸಬೇಕಾದ ಅನಿವಾರ್ಯತೆ ಇರುತ್ತದೆ.

**11.** ಪ್ರಾಸಾ-1 ವಿಜಯಕುಮಾರ ರೆಡ್ಡಿ ಪಿರ್ಯಾದಿ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿಃ 24.08.2022 ರಂದು ಮದ್ಯಾಹ್ನ 12.30 ಗಂಟೆಗೆ ಕನಕಗಿರಿ ತಾಲೂಕಿನ ಜೀರಾಳ ಗ್ರಾಮಸ್ಥರ ದೂರಿನ ಮೇರೆಗೆ ಗಂಗಾವತಿ ನಗರದಲ್ಲಿ ಅಬಕಾರಿ ಗಸ್ತು ಮಾಡುತ್ತಿರುವಾಗ ಕನಕಗಿರಿ ತಾಲೂಕಿನ ಜೀರಾಳ ಗ್ರಾಮದ ಒಂದು ಕಿರಾಣಿ ಅಂಗಡಿಯಲ್ಲಿ ಆರೋಪಿತನು ಅನಧಿಕೃತವಾಗಿ ಮದ್ಯವನ್ನು ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆ ಎಂದು ದೂರು

ಬಂದ ನಿಮಿತ್ಯ ತಾನು ಸಿಬ್ಬಂದಿಯೊಂದಿಗೆ ಕನಕಗಿರಿ ತಾಲೂಕಿನ ಜೀರಾಳ ಗ್ರಾಮದ ಒಂದು ಕಿರಾಣಿ ಅಂಗಡಿಗೆ ಬಂದು ದೂರು ನೀಡಿರುವ ಬಾತ್ಮಿಯಂತೆ ಒಂದು ಕಿರಾಣಿ ಅಂಗಡಿಗೆ ಬಂದಾಗ ಅಲ್ಲಿ ಇದ್ದ ಆರೋಪಿಯಾದ ನೀನು ಸಮವಸ್ತ್ರದಲ್ಲಿ ಇದ್ದ ಇವರನ್ನು ನೋಡಿ ಪರಾರಿಯಾದನು ಎಂಬುದಾಗಿ. ಜೀರಾಳ ಗ್ರಾಮ ಪಂಚಾಯತಿ ಸದಸ್ಯರನ್ನು ಓಡಿ ಹೋದ ಆರೋಪಿತನ ಹೆಸರು ಕೇಳಲಾಗಿ ಆತನ ಹೆಸರು ನಾಗಪ್ಪ ಬೊಮ್ಮನಾಳ ತಂದೆ ಬೀರಪ್ಪ ಬೊಮ್ಮನಾಳ ಅಂತಾ ತಿಳಿಸಿದನು ಎಂಬುದಾಗಿ, ಆತನ ಕಿರಾಣಿ ಅಂಗಡಿಯನ್ನು ಶೋಧಿಸುವ ಪೂರ್ವದಲ್ಲಿ ಶೋಧನಾ ಸಮುಚ್ಚಿತ ವಾರಂಟನ್ನು ತಯಾರಿಸಿ ಅದರ ಮೇಲೆ ಪಂಚರ ಹಾಗೂ ಸಿಬ್ಬಂದಿಗಳ ಸಹಿಗಳನ್ನು ಪಡೆದುಕೊಂಡು, ಕಿರಾಣಿ ಅಂಗಡಿಯನ್ನು ಶೋಧನೆ ಮಾಡಿ ನೋಡಲಾಗಿ ಕೌಂಟರ ಕೆಳಗಡೆ ಇದ್ದ ಎರಡು ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ.ಎಲ್. 8 ಪಿ.ಎಂ. ವಿಸ್ಕಿಯ 22 ಮದ್ಯದ ಟೆಟ್ರಾ ಪ್ಯಾಕೇಟಗಳು, 90 ಎಂ.ಎಲ್.ನ ಓ.ಟಿ. ವಿಸ್ಕಿಯ 71 ಟೆಟ್ರಾ ಪ್ಯಾಕೇಟಗಳು ಕಂಡುಬಂದವು ಎಂದು, ಎಲ್ಲಾ ಮುದ್ದೆ ಮಾಲುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯಾಗಿ ತೆಗೆದು ಅದಕ್ಕೆ ಬಿಳಿ ಬಟ್ಟೆ ಸುತ್ತಿ, ದಾರದಿಂದ ಕಟ್ಟಿ ಇಲಾಖಾ ಸೀಲ್ ಮಾಡಿರುವುದಾಗಿ, ನಂತರ ಎಲ್ಲಾ ವಸ್ತುಗಳನ್ನು ಸ್ಥಳದಲ್ಲಿ ಜಪ್ತ ಪಡಿಸಿಕೊಂಡು ಸ್ಥಳದಲ್ಲಿ ಮದ್ಯಾಹ್ನ 12-30 ರಿಂದ 1-30 ಗಂಟೆ ವರೆಗೆ ಪಂಚರ ಸಮಕ್ಷಮ ಪಂಚನಾಮೆ ಮಾಡಿರುವುದಾಗಿ, ನಂತರ ಜಪ್ತ ಪಡಿಸಿಕೊಂಡು ಮುದ್ದೆ ಮಾಲುಗಳನ್ನು ಠಾಣೆಗೆ ತೆಗೆದುಕೊಂಡು ಬಂದು ತಾನು ಸರ್ಕಾರದ ಪರವಾಗಿ ದೂರನ್ನು ದಾಖಲಿಸಿ ನಂತರ ಪ್ರ.ವ. ದಾಖಲಿಸಿರುವುದಾಗಿ, ನಂತರ ಮುದ್ದೆ ಮಾಲುಗಳನ್ನು ಸ್ವಾಧೀನದಲ್ಲಿ

ಇಟ್ಟುಕೊಳ್ಳಲು ಪ್ರಾದೇಶಿಕ ಅಧಿಕಾರಿಗಳಿಂದ ಅನುಮತಿ ಪಡೆದುಕೊಂಡಿರುವುದಾಗಿ. ನಂತರ ಮುಂದಿನ ತನಿಖೆಗಾಗಿ ಪ್ರಕರಣವನ್ನು ಚಾಸಾ-8 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ ನುಡಿದಿರುತ್ತಾರೆ.

**12.** ಪ್ರಾಸಾ-2 ಅಜಯ್ ಉಮದಿ ತನಿಖಾಧಿಕಾರಿ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ 26.08.2022 ರಂದು ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಪಡೆದುಕೊಂಡು ಅಲ್ಲಿವರೆಗೂ ಆದ ತನಿಖೆಯನ್ನು ಪರಿಶೀಲಿಸಿ ತನ್ನ ಮುಂದಿನ ತನಿಖೆಯನ್ನು ಕೈಗೊಂಡೆನು ಎಂದು, ದಿನಾಂಕ 30.08.2022 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದ ಜಾಗದ ಮಾಲೀಕತ್ವದ ವಿವರ ನೀಡುವ ಕುರಿತು ಪಿ.ಡಿ.ಒ ಜೀರಾಳ ರವರಿಗೆ ಪತ್ರ ಬರೆಯಲಾಯಿತು ಎಂಬುದಾಗಿ, ದಿನಾಂಕ 10.09.2022 ರಂದು ಆರೋಪಿತನು ಮಾನ್ಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಗಂಗಾವತಿಯಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಕಚೇರಿಗೆ ಹಾಜರಾಗಿದ್ದು, ಆತನ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿ, ಆತನನ್ನು ಠಾಣಾ ಮೇಲೆ ಬಿಡುಗಡೆ ಮಾಡಿರುವುದಾಗಿ, ದಿನಾಂಕ 12.09.2022 ರಂದು ಪ್ರಾದೇಶಿಕ ಸಹಾಯಕ ರಾಸಾಯನಿಕ ವಿಶ್ಲೇಷಣಾಧಿಕಾರಿಗಳು ರಾಯಚೂರು ಜಿಲ್ಲೆ ಸದರಿ ಜಪ್ತಾದ ಮುದ್ದೆ ಮಾಲಿನ ರಾಸಾಯನಿಕ ಪರೀಕ್ಷೆಗಾಗಿ ಪತ್ರ ಬರೆದು, ಅದರಂತೆ ದಿನಾಂಕ 14.09.2022 ರಾಸಾಯನಿಕ ವರದಿ ಬಂದಿದ್ದು, ರಾಸಾಯನಿಕ ವರದಿ ಪ್ರಕಾರ ಮಧ್ಯದ ಅಂಶ ಕಂಡು ಬಂದಿದ್ದು, ಮಾನವನ ಸೇವನೆಗೆ ಯೋಗ್ಯವಾಗಿರುತ್ತವೆ ಎಂದು ವರದಿ ನೀಡಿರುವುದಾಗಿ, ನಂತರ ಎಫ್ ಎಸ್ ಎಲ್ ರಾಯಚೂರುರವರಿಗೆ ಹೋಗಿ ತೆಗೆದುಕೊಂಡು ಬಂದ ಬಗ್ಗೆ ನೀಡಿದ ಹೇಳಿಕೆಯನ್ನು

ಸಿಬ್ಬಂದಿಯಾದ ಚಾಸಾ-7 ರವರಿಂದ ಪಡೆದುಕೊಂಡೆನು ಎಂದು, ದಿನಾಂಕ 20.09.2022 ರಂದು ಅಬಕಾರಿ ದಾಳಿ ನಡೆದ ಸಮಯದಲ್ಲಿ ಹಾಜರಿದ್ದ ಪಂಚರಾದ ಚಾಸಾ-2 ರಿಂದ 5 ರವರೊಡನೆ ಪ್ರಕರಣ ನಡೆದ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಹಾಜರಿದ್ದ ಪಂಚರುಗಳ ಸಮಕ್ಷಮ ಗುನ್ಹೆ ಜರುಗಿದ ಸ್ಥಳದ ವಿದ್ಯಾಮಾನಗಳನ್ನು ಹಾಜರಿದ್ದ ಸಿಬ್ಬಂದಿಯ ಹೇಳಿಕೆಯನ್ನು ಮರುಸೃಷ್ಟಿಯಾಗಿ ಹೇಳಿಕೆಯನ್ನು ಪಡೆದು ಸದರಿ ವಿದ್ಯಾಮಾನವು ಜಪ್ತಾದ ಮುದ್ದೆ ಮಾಲಿನಲ್ಲಿ ಮಧ್ಯದ ಅಂಶವಿರುವುದರ ಸಾಮ್ಯತೆಯನ್ನು ಖಚಿತಪಡಿಸಿಕೊಳ್ಳಲಾಯಿತು ಎಂದು, ಅದೇ ದಿನ ಚಾಸಾ-2 ರಿಂದ 5 ರವರ ಹೇಳಿಕೆಯನ್ನು ಪಡೆದುಕೊಂಡು, ಗಣಕಯಂತ್ರದಲ್ಲಿ ಅಚ್ಚುಗೊಳಿಸಲಾಯಿತು ಎಂದು, ದಿನಾಂಕ 21.09.2022 ರಂದು ಪಿ.ಡಿ.ಒ ಜೀರಾಳ ಇವರು ಸದರಿ ಸ್ಥಳದಲ್ಲಿ ನಡೆದ ಕೃತ್ಯಕ್ಕೆ ಸಂಬಂಧಿಸಿದಂತೆ ಪಂಚಾಯತ್ ರಿಜಿಸ್ಟರನಲ್ಲಿ ಸದರಿ ಜಾಗದ ಮಾಲೀಕತ್ವವವು ನೊಂದಣಿ ಮಾಡಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ, ದಿನಾಂಕ 16.12.2022 ರಂದು ತನಿಖೆ ಪೂರ್ಣಗೊಂಡಿದ್ದು, ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಇದ್ದು, ಅರೋಪಿತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**13.** ಪ್ರಾಸಾ-3 ಬಸವರಾಜ, ಪ್ರಾಸಾ-4 ಷಣ್ಮುಕಪ್ಪ ಮತ್ತು ಪ್ರಾಸಾ-5 ದುರುಗಪ್ಪ ದಾಳಿ ಪಂಚ ಸಾಕ್ಷಿದಾರರು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಈ ಪ್ರಕರಣದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ. ಈಗ

ಸುಮಾರು 3-4 ವರ್ಷಗಳ ಹಿಂದೆ ತಾವು ಕನಕಗಿರಿ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರು ಒಂದು ದಾಖಲೆಗೆ ತಮ್ಮ ಸಹಿ ಪಡೆದುಕೊಂಡಿರುತ್ತಾರೆ. ಅದರಲ್ಲಿರುವ ವಿಚಾರ ತಮಗೆ ಗೊತ್ತಿಲ್ಲ. ಪೊಲೀಸರು ಯಾವುದೇ ಪಂಚನಾಮೆ ಮಾಡಿ ಯಾವುದೇ ವಸ್ತು ಜಪ್ತು ಪಡಿಸಿಕೊಂಡಿಲ್ಲ. ಈ ಸಂಬಂಧ ಪೋಲೀಸರು ತಮ್ಮನ್ನು ಯಾವುದೇ ವಿಚಾರಣೆ ಮಾಡಿಲ್ಲ ತಾವು ಯಾವುದೇ ಹೇಳಿಕೆ ನೀಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿದರರನ್ನು ಸ.ಸ.ಅ ರವರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಪಾಟೀ ಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾದ ಯಾವುದೇ ಅಂಶಗಳನ್ನು ಹೊರಹೊಮ್ಮಿಸಿರುವುದಿಲ್ಲ.

**14.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ವಿನಂತಿ ಮೇರೆಗೆ ಚಾಸಾ-5 ರಿಂದ ಚಾಸಾ-7 ರವರನ್ನು ಪ್ರಕರಣದ ವಿಚಾರಣೆಯಿಂದ ಕೈಬಿಡಲಾಗಿದೆ.

**15.** ಪಿರ್ಯಾದಿರವರನ್ನು ಪ್ರಾಸಾ-1 ಅಂತಾ, ತನಿಖಾಧಿಕಾರಿಯವರನ್ನು ಪ್ರಾಸಾ-2 ಅಂತಾ, ದಾಳಿ ಪಂಚ ಸಾಕ್ಷಿದಾರರನ್ನು ಪ್ರಾಸಾ-3 ರಿಂದ 5 ಅಂತಾ, ಅಭಿಯೋಜನೆಯು ವಿಚಾರಿಸಿಕೊಂಡಿರುತ್ತದೆ. ಪ್ರಾಸಾ-3 ರಿಂದ 5 ರವರು ಪ್ರಾಸಾ-1 ಪಿರ್ಯಾದಿಯವರ ಸಾಕ್ಷ್ಯಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ-1 ಪಿರ್ಯಾಧಿ, ಪ್ರಾಸಾ-2 ತನಿಖಾಧಿಕಾರಿ ಇವರು ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದರೂ ಸಹ ಅವರು ಇಲಾಖಾ ಸಾಕ್ಷಿದಾರರಾಗಿದ್ದು, ಅವರ ಸಾಕ್ಷ್ಯಕ್ಕೆ ಪೂರಕವಾಗಿ ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ.

**16.** ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರ ಮೇರೆಗಿನ ಅಪರಾಧಗಳು 5 ವರ್ಷದ ಅವಧಿಯವರೆಗಿನ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದಾದ ಅಪರಾಧಗಳು ಆಗಿದ್ದು, ಕಾರಣ ಅವು ಸಂಜ್ಞೇಯ ಅಪರಾಧಗಳು ಆಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 154 ರ ಮೇರೆಗೆ ಸಂಜ್ಞೇಯ ಅಪರಾಧ ಮಾಡುವುದಕ್ಕೆ ಸಂಬಂಧಿಸಿದ ಪ್ರತಿಯೊಂದು ಸಮಾಚಾರವನ್ನು ಪೋಲಿಸ ಠಾಣೆಯ ಆಡಳಿತವನ್ನು ಹೊಂದಿರುವ ಒಬ್ಬ ಅಧಿಕಾರಿ ರಾಜ್ಯ ಸರ್ಕಾರವು ನಿಯಮಿಸಬಹುದಾದ ನಮೂನೆಯಲ್ಲಿ ಬರವಣಿಗೆ ಮಾಡತಕ್ಕದ್ದು. ಸರ್ವೋಚ್ಚ ನ್ಯಾಯಾಲಯದ ಪ್ರಕರಣದ ಸಂಖ್ಯೆಃಡಬ್ಲ್ಯೂ.ಪಿ**(**ಕ್ರಿಮಿನಲ್**) 68/2008** ರ ಲಲಿತಕುಮಾರಿ ವಿರುದ್ಧ ರಾಜ್ಯ ಸರ್ಕಾರ ಉತ್ತರ ಪ್ರದೇಶ ಪ್ರಕರಣದಲ್ಲಿ ಸಂಜ್ಞೇಯ ಅಪರಾಧ ಮಾಹಿತಿಯನ್ನು ದಂಡ ಪ್ರಕ್ರೀಯಾ ಸಂಹಿತೆ ಕಲಂ **154** ರಲ್ಲಿ ತಿಳಿಸಿದಂತೆ ಪ್ರಕರಣ ದಾಖಲಿಸುವುದು ಕಡ್ಡಾಯವಿರುತ್ತದೆ ಅಂತಾ ತೀರ್ಮಾನಿಸಿದ್ದು ಇರುತ್ತದೆ**.**

**17.** ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಗಮನಿಸಿದಾಗ, ಚಾಸಾ-1 ರವರು ಪ್ರಥಮವಾಗಿ ದೊರೆತ ಸಂಜ್ಞೇಯ ಅಪರಾಧ ಮಾಹಿತಿಯನ್ನು ದಂಡ ಪ್ರಕ್ರೀಯಾ ಸಂಹಿತೆ ಕಲಂ 154 ರಲ್ಲಿ ತಿಳಿಸಿದಂತೆ ನಿಗದಿತ ನಮೂನೆಯಲ್ಲಿ ದಾಖಲು ಮಾಡದೇ ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟು ಆರೋಪಿತನ ದಸ್ತಗಿರಿ ಮಾಡಿ, ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ನಂತರ ಠಾಣೆಗೆ ಹೋಗಿ ದೂರು ದಾಖಲು ಮಾಡುವ ಮೂಲಕ ದಂಡ ಪ್ರಕ್ರೀಯಾ ಸಂಹಿತೆ ಕಲಂ 154 ರ ಕಡ್ಡಾಯ ಷರತ್ತನ್ನು ಹಾಗೂ

ಮೇಲೆ ಹೇಳಿದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಆದೇಶಿಸಿದ ನಿಯಮವನ್ನು ಉಲ್ಲಂಘಿಸಿರುತ್ತಾರೆ.

**18.** ಪ್ರಾಸಾ-1 ದಾಳಿಗೆ ಹೋಗುವ ಪೂರ್ವದಲ್ಲಿ ಪ್ರ.ವ.ವ ದಾಖಲಿಸಿರುವುದಿಲ್ಲ. ಆ ಮೂಲಕ ಪ್ರಾಸಾ-1 ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ರ ಮೇರೆಗಿನ ಅಪರಾಧಗಳು 5 ವರ್ಷದ ಅವಧಿಯವರೆಗಿನ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದಾದ ಅಪರಾಧಗಳು ಆಗಿದ್ದು, ಕಾರಣ ಅವು ಸಂಜ್ಞೇಯ ಅಪರಾಧಗಳು ಆಗಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 154 ರ ಮೇರೆಗೆ ಸಂಜ್ಞೇಯ ಅಪರಾಧ ಮಾಡುವುದಕ್ಕೆ ಸಂಬಂಧಿಸಿದ ಪ್ರತಿಯೊಂದು ಸಮಾಚಾರವನ್ನು ಪೋಲಿಸ ಠಾಣೆಯ ಆಡಳಿತವನ್ನು ಹೊಂದಿರುವ ಒಬ್ಬ ಅಧಿಕಾರಿ ರಾಜ್ಯ ಸರ್ಕಾರವು ನಿಯಮಿಸಬಹುದಾದ ನಮೂನೆಯಲ್ಲಿ ಬರವಣಿಗೆ ಮಾಡತಕ್ಕದ್ದು. ಸದರಿ ನಿಯಮವನ್ನು ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

**19.** ಪ್ರಸ್ತುತ ಪ್ರಕರಣದಲ್ಲಿ ಪ್ರಾಸಾ-1 ಫಿರ್ಯಾದಿ ಮತ್ತು ಪ್ರಾಸಾ-2 ತನಿಖಾಧಿಕಾರಿಯವರು ಸಾಕ್ಷ್ಯದ ಹೊರತಾಗಿ ಬೇರ ಯಾವ ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ. ಸದರಿ ಪ್ರಾಸಾ-1 ಮತ್ತು 2 ಪೊಲೀಸರ ಅಧಿಕಾರಿಗಳು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿಯುವುದು ಸರ್ವೆ ಸಾಮಾನ್ಯವಾಗಿರುತ್ತದೆ. ಸದರಿ ಸಾಕ್ಷಿದಾರರು ಇಲಾಖಾ ಸಾಕ್ಷಿದಾರರಾಗಿದ್ದು, ಸದರಿ ಸಾಕ್ಷಿದಾರರ ಸಾಕ್ಷ್ಯಕ್ಕೆ ಪೂರಕವಾಗಿ ಸ್ವತಂತ್ರ ಸಾಕ್ಷಿದಾರರು ಯಾರೂ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಕೇವಲ ಪ್ರಾಸಾ-1 ಮತ್ತು 2 ಇಲಾಖಾ ಸಾಕ್ಷಿದಾರರ ಸಾಕ್ಷ್ಯಗಳಿಂದ, ನಿಶಾನೆಗಾಗಿ ಗುರುತಿಸಲ್ಪಟ್ಟ ದಾಖಲಾತಿಗಳ ಸಾಕ್ಷ್ಯದಿಂದ ಹಾಗೂ ಮು.ಮಾ.ಗಳ ಆಧಾರದಿಂದ

ಆರೋಪಿತನು ಮೇಲ್ಕಾಣಿಸಿದ ಕಲಂಗಳ ಅನುಸಾರ ಅಪರಾಧವನ್ನು ಎಸಗಿದ್ದಾರೆ ಎಂದು ಖಚಿತವಾಗಿ ನಿರ್ಣಯಕ್ಕೆ ಬರಲು ಸಾಧ್ಯವಿಲ್ಲ.

**20.** ಅಲ್ಲದೇ ಮಾದರಿಗಾಗಿ ತೆಗೆದ ಸ್ಯಾಂಪಲ್ ಸಾರಾಯಿ ತುಂಬಿದ ಪ್ಯಾಕೆಟ್ ಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಸಾರ ಹಾಗೂ ನೀಡಲ್ಪಟ್ಟಿರುವ ಮಾರ್ಗದರ್ಶಿ ಸೂತ್ರಗಳನುಸಾರ ನಿರ್ವಹಿಸಿರುವುದಿಲ್ಲ, ವಶಪಡಿಸಿಕೊಂಡ ಮು.ಮಾ.ಅನ್ನು ಮತ್ತು ಮಾದರಿಗಾಗಿ ತೆಗೆದ ವಸ್ತುವನ್ನು ಆರೋಪಿತನು ಅಕ್ರಮ ಸ್ವಾಧೀನದಲ್ಲಿದ್ದ ಬಗ್ಗೆ ಸೂಕ್ತ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.

**21.** ಅಭಿಯೋಜಕರು ವಿಚಾರಣೆಗೆ ಒಳಪಡಿಸಿಕೊಂಡಿರುವ ಸಾಕ್ಷಿದಾರರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಪ್ರಾಸಾ-1 ಮತ್ತು 2 ರವರು ಪೋಲಿಸ ಅಧಿಕಾರಿಗಳಾಗಿದ್ದು, ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯುವುದು ಸರ್ವೇ ಸಾಮಾನ್ಯವಾಗಿರುತ್ತದೆ. ಇವರ ಸಾಕ್ಷಕ್ಕೆ ಪೂರಕವಾಗಿ ಯಾವುದೇ ಸ್ವತಂತ್ರ ಸಾಕ್ಷಿದಾರರ ಸಾಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

**22.** ಅಭಿಯೋಜನೆಯು ಆರೋಪಿತನು ಕೃತ್ಯದಲ್ಲಿ ತೊಡಗಿದ ಬಗ್ಗೆ ಅಕ್ರಮವಾಗಿ ಯಾವುದೇ ಅನುಮತಿ ಇಲ್ಲದೇ, ಮಧ್ಯದ ಟೆಟ್ರಾ ಪ್ಯಾಕೀಟಗಳನ್ನು ಸ್ವಾಧೀನ ಹೊಂದಿದ್ದರೂ ಎನ್ನುವ ಬಗ್ಗೆ ಮತ್ತು ಅವರ ಸ್ವಾಧೀನದಿಂದ ಮಧ್ಯವನ್ನು ವಶಪಡಿಸಿಕೊಂಡ ಬಗ್ಗೆ ರುಜುವಾತು ಪಡಿಸಿಕೊಂಡಿರುವುದಿಲ್ಲ. ಆ ಕಾರಣದಿಂದ

ಅಭಿಯೋಜನೆಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 40ರ ಅನುಸಾರ ಸಹ ಪೂರ್ವಭಾವನೆಯ ಲಾಭವನ್ನು ಪಡೆಯಲು ಸಹ ಭಾಜನವಾಗಿರುವುದಿಲ್ಲ.

**23.** ಇಂತಹ ಸಂಧರ್ಭದಲ್ಲಿ ಆರೋಪಿತನು ಆಪಾದಿಸಲಾದಂತೆ ದಿನಾಂಕಃ 24.08.2022 ರಂದು ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ಅಬಕಾರಿ ಪೋಲಿಸ ಠಾಣೆ ವಲಯ ಗಂಗಾವತಿ ಹದ್ದಿ ಪೈಕಿ ಕನಕಗಿರಿ ತಾಲೂಕಿನ ಜೀರಾಳ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಒಂದು ಕಿರಾಣಿ ಅಂಗಡಿಯಲ್ಲಿ ಆರೋಪಿತನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಸೆಕ್ಷನ್ 14, 15 ರ ಉಲ್ಲಂಘನೆ ಮಾಡಿ ಆರೋಪಿತನು ತನ್ನ ಸ್ವಂತ ಫಾಯಿದೆಗೋಸ್ಕರ ಅನಧಿಕೃತವಾಗಿ ತನ್ನ ಹತ್ತಿರ ಯಾವುದೇ ಲೈಸನ್ಸ ಅಥವಾ ಪರಮಿಟ್ ಇಲ್ಲದೆ ಇದ್ದರೂ ಅನಧಿಕೃತವಾಗಿ ಮಾನವ ಸೇವನೆಗೆ ಯೋಗ್ಯವಲ್ಲದಂತಹ 180 ಎಂ.ಎಲ್ ಅಳತೆಯ 8ಪಿ.ಎಮ್ ವಿಸ್ಕಿಯ ರಟ್ಟಿನ ಬಾಕ್ಸಗಳ ಮತ್ತು 90 ಎಂ.ಎಲ್ ಅಳತೆಯುಳ್ಳ ಓಸಿ ವಿಸ್ಕಿಯ ಒಟ್ಟು 71 ಟೆಟ್ರಾ ಪ್ಯಾಕಗಳು, ಮದ್ಯವನ್ನು ಮಾನವ ಸೇವನೆಗೆ ಯೋಗ್ಯವಲ್ಲ ಅಂತಾ ಗೊತ್ತಿದ್ದರೂ ಮಾರಾಟ ಮಾಡುವ ಸಲುವಾಗಿ ಆರೋಪಿತನು ತನ್ನ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದ ಎಂಬ ತಿರ್ಮಾನಕ್ಕೆ ಬರುವುದು ಸಮಂಜಸವಾಗಿರುವುದಿಲ್ಲ ಹಾಗೂ ಸಾಕಷ್ಟು ಸಾಕ್ಷ್ಯದ ಕೊರತೆಯು ಸಹ ಇದಕ್ಕೆ ಕಾರಣವಾಗಿರುತ್ತದೆ. ಆದಕಾರಣ ಅಭಿಯೋಜನೆಯು ಆರೋಪಿತನು ವಿರುದ್ದ ಹೊರಿಸಿರುವ ಆಪಾದನೆಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿರುತ್ತದೆ. ಆದಕಾರಣ ಆರೋಪಿತನ ವಿರುದ್ದ ಅಪರಾಧಿಕ ಭಾದ್ಯತೆಗಳನ್ನು ಹೊರಿಸಿ ಅವನ ವೈಯಕ್ತಿಕ ಸ್ವಾತಂತ್ರ್ಯಹರಣ ಮಾಡುವುದು ಸಹ ಸ್ಥಾಪಿತ

ತತ್ವಗಳನುಸಾರ ಈ ಪ್ರಕರಣದ ಸಂಗತಿಗಳು ಹಾಗೂ ಸಂಧರ್ಭಗಳನುಸಾರ ಸಾಧ್ಯವಾಗಿರುವುದಿಲ್ಲ.

**24.** ಒಟ್ಟಾರೆಯಾಗಿ ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ಆರೋಪಿತನು ಆಪಾದಿಸಲಾದ ಕೃತ್ಯವನ್ನು ಎಸಗಿದ್ದಾನೆ ಎನ್ನುವ ಸಂಗತಿಯನ್ನು ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗಾಗಿ ಇನ್ನೂ ಹೆಚ್ಚಿನ ಚರ್ಚೆಗೆ ಆಸ್ಪದ ನೀಡದೆ ಆರೋಪಿತನ ವಿರುದ್ಧದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆ ವಿಫಲವಾಗಿದೆ ಎನ್ನುವುದಾಗಿ ತೀರ್ಮಾನಿಸಿದ್ದು, ತನ್ಮೂಲಕ ಈ ಮೇಲಿನ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**25.** **<u>ಅಂಶ ಸಂಖ್ಯೆ 3</u>:-** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನ್ಯಾಯಾಲಯವು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

**-: <u>ಆದೇಶ</u> :-**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 14, 15, 32, 34, 38(A), 43 ಮತ್ತು ಭಾರತೀಯ ದಂಡ ಸಂಹಿತ 272 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತಿನ ಆರೋಪಗಳಿಗಾಗಿ ಆರೋಪಿತನನ್ನು ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.

ಈ ಪ್ರಕರಣದಲ್ಲಿ ಹಾಜರುಪಡಿಸಿದ ಮು.ಮಾ-1 ಮಧ್ಯದ ಟೆಟ್ರಾ ಪ್ಯಾಕೇಟ್‌ಗಳು ಯಾವುದೇ ಮೌಲ್ಯವುಳ್ಳದ್ದಾಗಿಲ್ಲದಿರುವುದರಿಂದ ಅವುಗಳನ್ನು ಮೇಲ್ಮನವಿಯ ಅವಧಿ ಮುಗಿದ ಬಳಿಕ ನಾಶಪಡಿಸಲು ಸಂಬಂಧಪಟ್ಟ ಪೋಲೀಸ್ ಠಾಣೆಗೆ ಹಿಂದಿರುಗಿಸಲು ಕಚೇರಿಗೆ ಆದೇಶಿಸಲಾಗಿದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರನಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕಃ **04** ನೇ ಮಾರ್ಚ್ **2026** ರಂದು ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲ್ಪಟ್ಟಿತ್ತು)

**(ಮೇಘಾ ಸೋಮಣ್ಣವರ)**
**1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ.ಗಂಗಾವತಿ.**

## ಅಭಿಯೋಜನೆ/ಆರೋಪಿತರ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

**1)** ಅಭಿಯೋಜನೆ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

| | | | |
|---|---|---|---|
| ಅಸಾ-**1** | : | ವಿಜಯಕುಮಾರ ರೆಡ್ಡಿ ತಂದೆ ಬಸವನಗೌಡ | ಪಿರ್ಯಾದಿ ಸಾಕ್ಷಿ |
| ಅಸಾ-**2** | : | ಅಜಯ್ ತಂದೆ ಮೋಹನ್ ಉಮದಿ | ತನಿಖಾಧಿಕಾರಿ |
| ಅಸಾ-**3** | : | ಬಸವರಾಜ್ ತಂದೆ ಗುಡದಪ್ಪ | ದಾಳಿ ಪಂಚ ಸಾಕ್ಷಿದಾರ |
| ಅಸಾ-**4** | : | ಷಣ್ಮುಖಪ್ಪ ತಂದೆ ಯಂಕಪ್ಪ | ದಾಳಿ ಪಂಚ ಸಾಕ್ಷಿದಾರ| |
| ಅಸಾ-**5** | : | ದುರುಗಪ್ಪ ತಂದೆ ದುರುಗಪ್ಪ ಕನಕೂರು | ದಾಳಿ ಪಂಚ ಸಾಕ್ಷಿದಾರ |

**2)** ಆರೋಪಿತರ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

ಇಲ್ಲ

**3)** ನ್ಯಾಯಾಲಯದ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

ಇಲ್ಲಾ

## ಅಭಿಯೋಜನೆ/ಆರೋಪಿತರ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರ

**1)** ಅಭಿಯೋಜನೆ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರ

| | | |
|---|---|---|
| 1. | ನಿಶಾನೆ ಪಿ-**1/PW1:** | ಶೋಧನಾ ವಾರೆಂಟ್, **(PW-3** ಎ**)**, **(PW-1b)**, **(PW-4c)** ಸಹಿಗಳು |
| 2. | ನಿಶಾನೆ ಪಿ-**2/PW1:** | ಸ್ವತ್ತಿನ ಪಟ್ಟಿ, **(PW-3** ಎ**),(PW-1b),(PW-4c)** ಸಹಿಗಳು |
| 3. | ನಿಶಾನೆ ಪಿ-**3/PW1:** | ಮಾದರಿ ಶೀಲು, **(PW-1** ಎ**),(PW-3b),(PW-4c)** ಸಹಿಗಳು |
| 4. | ನಿಶಾನೆ ಪಿ-**4/PW1 :** | ಪಂಚನಾಮೆ, **(PW-1** ಎ**),(PW-3b),(PW-4c)** ಸಹಿಗಳು |
| 5. | ನಿಶಾನೆ ಪಿ-**5/PW1:** | ದೂರು, **(PW-1** ಎ**)** ಸಹಿ |
| 6. | ನಿಶಾನೆ ಪಿ-**6/PW1:** | ಪ್ರ.ವ.ವರದಿ**= (PW-1** ಎ**)** ಸಹಿ |
| 7. | ನಿಶಾನೆ ಪಿ-**7/PW1:** | ಜಪ್ತಿ ವಸ್ತುಗಳನ್ನು ತಾಬಾದಲ್ಲಿ ಇಟ್ಟುಕೊಳ್ಳಲು ಬರೆದ ಅನುಮತಿ ಪತ್ರ**= (PW-1** ಎ**)** ಸಹಿ |
| 8. | ನಿಶಾನೆ ಪಿ-**8:** | ಪಿ.ಡಿ.ಓ ಕನಕಗಿರಿರವರಿಗೆ ಬರೆದ ಪತ್ರ**,** |
| 9. | ನಿಶಾನೆ ಪಿ-**9/PW2:** | ಎಫ್.ಎಸ್.ಎಲ್ ರಾಯಚೂರು ಇವರಿಗೆ ಬರೆದ ಪತ್ರ ಮತ್ತು ಸಾಕ್ಷಿ ಸಹಿ |
| 10. | ನಿಶಾನೆ ಪಿ-**10/PW2:** | ಎಫ್. ಎಸ್.ಎಲ್ ವರದಿ ಮತ್ತು ಸಹಿ |
| 11. | ನಿಶಾನೆ ಪಿ-**11/PW2:** | ಗ್ರಾಮ ಪಂಚಾಯತಿ ಜಿರಾಳ ಪಿ.ಡಿ.ಓ ರವರು ಬರೆದ ಉತ್ತರ |
| 12. | ನಿಶಾನೆ ಪಿ-**12/PW3:** | ಪ್ರಾಸಾ-**3** ಸಾಕ್ಷಿದಾರನ ಹೇಳಿಕೆ |
| 13. | ನಿಶಾನೆ ಪಿ-**13/PW4:** | ಪ್ರಾಸಾ-**4** ಸಾಕ್ಷಿದಾರನ ಹೇಳಿಕೆ |
| 14. | ನಿಶಾನೆ ಪಿ-**14/PW5:** | ಪ್ರಾಸಾ-**5** ಸಾಕ್ಷಿದಾರನ ಹೇಳಿಕೆ |

**2)** ಆರೋಪಿತರ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರ

ಇಲ್ಲಾ

3) <u>ನ್ಯಾಯಾಲಯದ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರ</u>

ಇಲ್ಲಾ

4) <u>ಮುದ್ದೆಮಾಲಿನ/ಜಪ್ತಾದ ವಸ್ತುಗಳ ಬಗ್ಗೆ ವಿವರ</u>

ಮುದ್ದೆ ಮಾಲು-1 ಮಧ್ಯದ ಟೆಟ್ರಾ ಪ್ಯಾಕೀಟಗಳು

**(ಮೇಘಾ ಸೋಮಣ್ಣವರ)**
**1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ.ಗಂಗಾವತಿ.**